ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ

637 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಎಷ್ಟು ಮನವಿಗಳು ಬಂದಿರುತ್ತವೆ (ಸಂಪೂರ್ಣವಾದ ವಿವರವನ್ನು ನೀಡುವುದಾಗಬೇಕು)?

ಆ) ಅವುಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಷೇರು ಹಣ ಸಂಗ್ರಹಿಸಲು ಅನುಮತಿಯನ್ನು ನೀಡಲಾಗಿರುವುದು? (ಸಂಪೂರ್ಣವಾಗಿ ವಿವರವಾದ ಮಾಹಿತಿಯನ್ನು ಕೊಡುವುದಾಗಬೇಕು)

ಇ) ಈ ಷೇರು ಹಣವನ್ನು ಎಷ್ಟು ದಿವಸಗಳೊಳಗಾಗಿ ಕೂಡಿಸುವುದಾಗಬೇಕೆಂದು ನಿರ್ಧಾರವನ್ನು ಹಾಕಲಾಗಿರುವುದು?

ಈ) ಕೇಂದ್ರ ಸರ್ಕಾರದವರು ಹೊಸದಾಗಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿರುವವರು? (ಸಂಪೂರ್ಣ ಮಾಹಿತಿ ಕೊಡುವುದಾಗಬೇಕು)

ಡಾ ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು 63 ಮನವಿಗಳು ಬಂದಿರುತ್ತವೆ. ವಿವರವನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ಆ) ಸಹಕಾರ ಕ್ಷೇತ್ರದಲ್ಲಿ 7 ಸಕ್ಕರೆ ಕಾರ್ಖಾನೆಗಳಿಗೆ ಷೇರು ಹಣ ಸಂಗ್ರಹಿಸಲು ಅನುಮತಿಯನ್ನು ನೀಡಲಾಗಿರುತ್ತದೆ. ಇವುಗಳಲ್ಲಿ 6 ಪ್ರಸ್ತಾವನೆಗಳು ಅನುಮತಿ ಪತ್ರ ನೀಡುವಿಕೆಗಾಗಿ ಭಾರತ ಸರ್ಕಾರದ ಮುಂದಿರುತ್ತದೆ ಮತ್ತು ಉಳಿದ ಒಂದು ಪ್ರಸ್ತಾವನೆಯು ಇನ್ನೂ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ವಿವರಗಳನ್ನು ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಇ) ಷೇರು ಹಣವನ್ನು ಕೂಡಿಸುವ ಬಗ್ಗೆ ಗಡುವು ನಿಗಧಿಪಡಿಸಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಅನುಮತಿ ಪತ್ರ ನೀಡುವ ಬಗ್ಗೆ ಗಡುವು ಇಲ್ಲದಿರುವುದರಿಂದ ಷೇರು ಕೂಡಿಸುವ ಬಗ್ಗೆ ಗಡುವು ನಿಗದಿಪಡಿಸುತ್ತಿಲ್ಲ.

ಈ) ಇತ್ತೀಚೆಗೆ ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಇನ್ನೂ ಯಾವ ಪ್ರಸ್ತಾವನೆಗೂ ಅಧಿಕೃತವಾಗಿ ಅನುಮತಿ ನೀಡಿರುವುದಿಲ್ಲ.

ಅನುಬಂಧ - ಅ

ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಸಲ್ಲಿಸಿರುವ ಪ್ರಸ್ತಾವನೆಗಳ ವಿವರ

ಜಿಲ್ಲೆ	ಪ್ರಸ್ತಾವನೆಯ ಹೆಸರು		ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ	ಕ್ಷೇತ್ರ
1. ಬಿಜಾಪುರ	1.	ರೈತರ ಸ.ಸ.ಕಾ.ನಿ.	ರನ್ನನಗರ	ಸಹಕಾರಿ ವಲಯ
	2.	ಕೃಷ್ಣಾ ಘಟಪ್ರಭಾ ಸ ಸ ಕಾ ನಿ	ಟರಡಲ್	”
	3.	ಮೈಸೂರು ಫ್ರೂಟ್ ಪ್ರಾಡಕ್ಟ್ಸ್ ಬೆಂಗಳೂರು	ಸ್ಥಳ ಸೂಚಿಸಿಲ್ಲ	ಖಾಸಗಿ ವಲಯ
	4.	ಕೃಷ್ಣಾತೀರ ರೈತರ ಸ ಸ ಕಾ ಜಮಖಿಂಡಿ	ಚಿಕ್ಕಪಡಸಲಗಿ	ಕೋಆಪರೇಟಿವ್
	5.	ಭೀಮಾಶಂಕರ್ ಸ ಸ ಕಾ ಇಂಡಿ	ಮರಗೂರ್	”
	6.	ಮೆ ಚಾಮುಂಡೇಶ್ವರಿ ಶುಗರ್ಸ್ ಲಿ. ಬೆಂಗಳೂರು	ರನ್ನನಗರ ಮುಧೋಳ್ ತಾ	ಖಾಸಗಿ ವಲಯ
	7.	ದೇವಿ ಪಲನಿ ಸ್ವಾಮಿ ಮತ್ತು ಕಂ ಲಿ ಮದ್ರಾಸ್	ಇಂಡಿ	”
	8.	ಕೆ ಎಸ್ ಐ ಐ ಡಿ ಸಿ ಬೆಂಗಳೂರು	ಬಿಜಾಪುರ ಜಿಲ್ಲೆ	”
	9.	ಶಂಕರ್ ನಾರಾಯಣ ಶುಗರ್ಸ್ ಲಿ.	ಜಮಖಿಂಡಿ	”
	10.	ಕನೋರಿಯಾ ಇಂಡಸ್ಟ್ರೀಸ್ ಲಿ.	ಆಲಮಟ್ಟಿ	”
	11.	ಮುಧೋಸ್ ಶುಗರ್ಸ್ (ಎಸ್ಪಿ. ಪಾಟೀಲ್)	ಮುಧೋಳ್	”

		12.	ಜಮಖಂಡಿ ಶುಗರ್ಸ್	ಹಿರೇಪಡಸಲಗಿ .	”
2.	ಬೀದರ್	1.	ಅನುಭವ ಮಂಟಪ ಶುಗರ್ಸ್ ಲಿ. ಬೆಂಗಳೂರು	ಬಸವಕಲ್ಯಾಣ	ಖಾಸಗಿ ವಲಯ
		2.	ಮಹಾತ್ಮಾ ಗಾಂಧಿ ಸಸಕಾ ಭಾಲ್ಕಿ	ಹುಂಜಿ ಹಾಚಿಕ್ಕಠ	ಸಹಕಾರಿ ವಲಯ
		3.	ದಾಲ್ಮಿಯಾ ಸಿಮೆಂಟ್ಸ್ (ಭಾರತ ಲಿ ಹೊಸ ಡೆಲ್ಲ	ಮುತ್ತಂಗಿ, ಹುಮನಾಬಾದ್ ತಾ	ಖಾಸಗಿ ವಲಯ
		4.	ಜುವಾರಿ ಆಗ್ರೋ ಕೆಮಿಕಲ್ಸ್ ಲಿ. ಗೋವಾ	ಹಳ್ಳಿಖೇಡ್, ಹುಮ್ನಾಬಾದ್ ತಾ	”
		5.	ಕೆ ಎಸ್ ಐ ಡಿ ಸಿ ಬೆಂಗಳೂರು	ಬಸವಕಲ್ಯಾಣ	”
		6.	ತಿಕ್ಕವರಪ್ಪ ಶುಗರ್ಸ್ ಹೈದರಾಬಾದ್	ಬಸವಕಲ್ಯಾಣ	”
		7.	ವಾಸುದೇವಿ ಕೈಲಾಸ್	ಸಂಗಮ್	”
		8.	ಬಸವೇಶ್ವರ ಶುಗರ್ಸ್	ಬಸವಕಲ್ಯಾಣ	”
		9.	ಕೋತಾರೀ ಇಂಡಸ್ಟ್ರೀಸ್ ಕಾರ್ಪೊರೇಷನ್	ಬಸವಕಲ್ಯಾಣ	”
		10.	ತಿರು ಅರೋರನ್ ಶುಗರ್ಸ್ ಲಿ	ಬೀದರ್ ತಾಲ್ಲೂಕ್	”
		11.	ಸೌತ ಇಂಡಿಯಾ ವಿಸ್ಕೊಸ್ ಲಿ.	ಬೀದರ್	”
3.	ಉತ್ತರ ಕನ್ನಡ	1.	ಕೆ.ಎನ್. ಗುರುಸ್ವಾಮಿ ಮತ್ತು ಕಂ. ಬೆಂಗಳೂರು	ಮುರುಕವಾಡ,ಹಳಿಯಾಲ ತಾ	”
		2.	ಮೆ: ಗುರುಕೃಪಾ ಅರುಣಾ ಶುಗರ್ಸ್ ಮತ್ತು ಕೆಮಿಕಲ್ಸ್ ಬೆಂಗಳೂರು	ಹಳಿಯಾಲ	”
		3.	ಮೆ : ಇ ಐ ಡಿ ಪ್ಯಾರೀ (ಇಂಡಿಯಾ) ಲಿ. ಮದ್ರಾಸ್	ಹಳಿಯಾಲ	”
		4.	ಮೆ : ಮಲೆನಾಡು ಕಾಳಿಕಾಂಬ ಎಸ್ ಎಸ್ ಕೆ ಲಿ	ಬಸವಳ್ಳಿ	”
		5.	ವಸ್ಪ್ ಕೋಸ್ಟ್ ಪೇಪರ್ ಮಿಲ್ಸ್	ಹಳಿಯಾಳ	ಸಹಕಾರಿ ವಲಯ

4.	ಮಂಡ್ಯ	1.	ಕೊಪ್ಪಾ ಶುಗರ್ಸ್ ಪ್ರೋಜೆಕ್ಟ್ ಮದ್ದೂರು	ಕೊಪ್ಪಾ ಮದ್ದೂರು ತಾ	ಖಾಸಗಿ ವಲಯ
		2.	ಮೆ ಕೆ ಇ ಮೈಯಿದೂ ಪಾತಿಯಾರಾ	ಮಂಡ್ಯ ಜಿಲ್ಲೆ	”
		3.	ಮೆ. ನಾಕಾ ಮತ್ತು ಕಂ ಮದ್ರಾಸ್	ಹಾರಾಗುರ್, ಮಲವಳ್ಳಿ ತಾ :	”
5.	ಬೆಂಗಳೂರು	1.	ಮೂಕಾಂಬಿಕಾ ಶುಗರ್ಸ್	ರಾಮನಗರಂ	ಖಾಸಗಿ ವಲಯ
6.	ಶಿವಮೊಗ್ಗ	1.	ಕರ್ನಾಟಕ ಬ್ರೇವರೀಸ್ ಮತ್ತು ಡಿಸ್ಟಿಲರೀಸ್	ಚಿನ್ನಗಿರಿ	”
		2.	ಮೆ ಸಹ್ಯಾದ್ರಿ ಶುಗರ್ಸ್ ಲಿ.	ಚನ್ನಗಿರಿ	”
		3.	ಸೂರ್ಯಲಕ್ಷ್ಮೀ ಶುಗರ್ಸ್ ಮಿಲ್ಸ್	ಚನ್ನಗಿರಿ	”
		4.	ಮಲೆನಾಡು ಶುಗರ್ಸ್	ಅರಸನಘಟ್ಟ, ಭದ್ರಾವತಿ ತಾ	”
7.	ಮೈಸೂರು	1.	ಮೆ : ಅದಿಪರಾಶಕ್ತಿ ಶುಗರ್ಸ್	ಗುಂಡ್ಲುಪೇಟೆ ಅಥವಾ ಹೆಚ್ ಡಿ ಕೋಟೆ	”
		2.	ರ್ಯಾಮ್ಕೋ ಇಂಡಸ್ಟ್ರೀಸ್ ಮದ್ರಾಸ್	ಬನ್ನೂರು ಟಿ ನರಸೀಪುರ ತಾ	”
		3.	ಶ್ರೀವಿದ್ಯಾ	ನಂಜನಗೂಡು	”
		4.	ಶ್ರೀ ಪ್ರೇಂಗುಪ್ತಾ	ನಂಜನಗೂಡು	”
		5.	ಶ್ರೀ ಪಿ.ಕೆ. ಅಹಮದ್	ಮೈಸೂರು ಜಿಲ್ಲೆ	”
		6.	ದಿ ಈಸ್ವರನ್ ಕ್ಯಾಚರ್ ಟೀ ಕಂ ಲಿ	ಬನ್ನೂರು ಟಿ. ನರಸೀಪುರ ತಾ	”
		7.	ಕೆ. ಚಂದ್ರಪ್ರಕಾಶ್	ಬನ್ನೂರು ಟಿ. ನರಸೀಪುರ ತಾ	”
		8.	ಹೆಚ್. ದಾಸಪ್ಪಾ ಮತ್ತು ಸನ್ಸ್ (ಪೈ) ಲಿ	ಬನ್ನೂರು ಟಿ. ನರಸೀಪುರ ತಾ	”
		9.	ಹೆಚ್ ಯಶೋಧಮ್ಮ	ಬನ್ನೂರು ಟಿ. ನರಸೀಪುರ ತಾ	”
		10.	ಶ್ರೀ ದಯಾನಂದ ಸಾಗರ್	ರಂಗನಾಥಪುರಂ, ಟಿ. ನರಸೀಪುರ ತಾ	”

		11.	ಶ್ರೀ ಚಂದ್ರಶೇಖರ್	ಪೆರಿಯಾಪಟ್ಟಣ	”
		12.	ಶ್ರೀ ಇಂದಿರಾ ಶುಗರ್ಸ್,	ಮೈಸೂರು ಚೌಡಹಳ್ಳಿ	”
		13.	ಶ್ರೀ ಮನೋರಥ ಮರಕೆಂಟೈಲ್ಸ್ ಲಿ.	ಸತ್ಯಗಾಲ	”
8.	ಬೆಳಗಾಂ	1.	ಮಾರ್ಕಂಡೇಯ ಎಸ್ ಎಸ್ ಕೆ	ಬೆಳಗಾಂ ತಾ ಕಾಕಟಿ	ಸಹಕಾರಿ ವಲಯ
		2.	ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್ವೆಸ್ಟ್ಮೆಂಟ್ ಕಾರ್ಪೊರೇಷನ್ ಲಿ	ಸೆಗುಣ	ಖಾಸಗಿ ವಲಯ
		3.	ಸಿರಗುಪ್ಪಾ ಶುಗರ್ಸ್	ಸಿರಗುಪ್ಪಿ ಅಥಣಿ	”
		4.	ಶ್ರೀ ಎಸ್.ಬಿ. ಪಾಟೀಲ್, ವಿಜಯನಗರ ಅಗ್ರೋ ಇಂಡಸ್ಟ್ರೀಸ್ (ಪ್ರೈ) ಲಿ.	ಖಾಗವಾಡ್	”
		5.	ಮೆ: ಸಿಂಹಾದ್ರಿ ಶುಗರ್ಸ್ ಲಿ.	ರಾಯಬಾಗ್	”
		6.	ಮೆ ಅನಂದಿ ಶುಗರ್ಸ್ ಲಿ.	ಸಾರಪ್ಪ, ಹಿಕ್ಕೇರಿ ತಾ	”
		7.	ಮೆ ಸನಾತನ್ ಇನ್ವೆಸ್ಟ್ಮೆಂಟ್ ಕಂ. ಲಿ.	ತೊರ್ಗಲ್ ರಾಮದುರ್ಗ ತಾ	”
		8.	ಶ್ರೀ ರಾಮ ಕೋ ಶುಗರ್ ಫ್ಯಾಕ್ಟರಿ ಲಿ	ಬುಗಟೆ ಅಲೂರು, ಹುಕ್ಕೇರಿ ತಾ	”
		9.	ವೆಸ್ಟ್ಕೋಸ್ಟ್ ಪೇಪರ್ ಮಿಲ್ಸ್	ಖಾನಾಪುರ	”
		10.	ಸೋಮೇಶ್ವರ ಸಸಕಾ,ನಿ	ಬೈಲಹೊಂಗಲ	”
9.	ಧಾರವಾಡ	1.	ಮೆ ಮಂಜುನಾಥ ಎಸ್ ಎಸ್ ಕೆ (ನಿ)	ಅರವಟಗಿ ತಾ ಧಾರವಾಡ	ಖಾಸಗಿ ವಲಯ
10.	ಚಿತ್ರದುರ್ಗಾ	1.	ಶ್ರೀ ಎಸ್ ರಾಜಶೇಖರಪ್ಪ	ಮಲೆಬೆನ್ನೂರು ತಾ ಹರಿಹರ	”
11.	ಕೂಡಗು	1.	ಮೆ ಇ ಐ ಡಿ ಪ್ಯಾರೀ (ಇಂಡಿಯಾ ಲಿ)	ಕುಶಾಲನಗರ	”
12.	ಹಾಸನ	1.	ನರಸಿಂಹ ಶುಗರ್ಸ್	ಹೊಳೆನರಸೀಪುರ	”

ಅನುಬಂಧ 'ಆ'

ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಶಿಫಾರಸ್ಸು ಮಾಡಲಾಗಿರುವ ಪ್ರಸ್ತಾವನೆಗಳ ವಿವರ

	ಪ್ರಸ್ತಾವನೆಯ ಹೆಸರು	ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ
1.	**ಸಹಕಾರಿ ಕ್ಷೇತ್ರ**	
1)	ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ ಬಾಲ್ಕಿ. ಬೀದರ್ ಜಿಲ್ಲೆ	ಹಂಚಿ : ಹದಕ್ಕಥ, ಬೀದರ್ ಜಿಲ್ಲೆ
2)	ರೈತರ ಸಹಕಾರ ಸಕ್ಕರೆ ಕಾರ್ಖಾನೆ ಮುಧೋಳ್ ಬಿಜಾಪುರ ಜಿಲ್ಲೆ	ರನ್ನ, ನಗರ ಬಿಜಾಪುರ ಜಿಲ್ಲೆ
3)	ಕೃಷ್ಣಾ ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ತೆರದಾಳ ಬಿಜಾಪುರ ಜಿಲ್ಲೆ	ತೇರದಾಳ ಬಿಜಾಪುರ ಜಿಲ್ಲೆ
4)	ಕೃಷ್ಣಾ ತೀರ ರೈತರ ಸಹಕಾರ ಸಕ್ಕರೆ ಕಾರ್ಖಾನೆ ಚಿಕ್ಕಪಡಸಲಗಿ, ಜಮಖಂಡಿ ತಾಲ್ಲೂಕು ಬಿಜಾಪುರ ಜಿಲ್ಲೆ	ಚಿಕ್ಕಪಡಸಲಗಿ, ಬಿಜಾಪುರ ಜಿಲ್ಲೆ
5)	ಭೀಮಾ ಶಂಕರ ಸಹಕಾರ ಸಕ್ಕರೆ ಕಾರ್ಖಾನೆ, ಇಂಡಿ ಬಿಜಾಪುರ ಜಿಲ್ಲೆ	ಮರಗೂರು, ಬಿಜಾಪುರ ಜಿಲ್ಲೆ
6)	ಮಾರ್ಕಂಡೇಯ ಸಹಕಾರ ಸಕ್ಕರೆ ಕಾರ್ಖಾನೆ	ಕಾಕತಿ, ಬೆಳಗಾಂ ಜಿಲ್ಲೆ.
2.	**ರಾಜ್ಯ ಸ್ಕ್ರೀನಿಂಗ್ ಕಮಿಟಿಯ ಮುಂದೆ ಪರಿಶೀಲನೆಯಲ್ಲಿರುವ ಪ್ರಸ್ತಾವನೆಗಳು :**	
7)	ಸೋಮೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ	ಬೈಲಹೊಂಗಲ ಬೆಳಗಾವಿ ಜಿಲ್ಲೆ